ಒ.ಎಸ್. ನಂ.4/2021
ಡಿಡಬ್ಲ್ಯು-1

ದಿನಾಂಕ 06.11.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಪಾಟಿ ಸವಾಲುಃ ವಾದಿ ಪರ ವಕೀಲರಿಂದ

ಚಂದಪ್ಪ ಮತ್ತು ದೇವಮ್ಮ ನನ್ನ ತಂದೆ-ತಾಯಿ ಎಂದರೆ ಸರಿ. ನನ್ನ ತಂದೆಗೆ 03-ಜನ ಗುಂಡು ಮಕ್ಕಳು ಮತ್ತು 02-ಜನ ಹೆಣ್ಣು ಮಕ್ಕಳು ಎಂದರೆ ಸರಿ. ನನ್ನ ತಂದೆ ದಿನಾಂಕ 15.09.2007 ರಂದು ಮತ್ತು ನನ್ನ ತಾಯಿ 2010 ರಲ್ಲಿ ಮೃತಪಟ್ಟಿರುತ್ತಾರೆ ಎಂದರೆ ಸರಿ. ದಾವಾಸ್ತಿಗಳು ಪಿತ್ರಾರ್ಜಿತ ಆಸ್ತಿಗಳೆಂದರೆ ಸರಿ. ನನ್ನ ತಂದೆ ಮೃತಪಟ್ಟ ನಂತರ ಸರ್ವೆ ನಂ.30 ಮತ್ತು 23 ರಲ್ಲಿ ನನ್ನ ಹಾಗೂ ನನ್ನ ಅಣ್ಣತಮ್ಮಂದಿರ ಹೆಸರು ಜಂಟಿಯಾಗಿ ಬಂದಿರುತ್ತದೆ ಎಂದರೆ ಸರಿ. ಸರ್ವೆ ನಂ.20/5 ಖರೀದಿ ಮಾಡುವ ಸಮಯದಲ್ಲಿ ನನ್ನ ತಂದೆ-ತಾಯಿ ಜೀವಂತವಿದ್ದರು ಎಂದರೆ ಸರಿ. ಸರ್ವೆ ನಂ.30 ಮತ್ತು 23 ರಿಂದ ಬಂದ ಉತ್ಪನ್ನಗಳ ಆದಾಯದಿಂದ ಸರ್ವೆ ನಂ.20/5 ನ್ನು ಖರೀದಿಸಿರುತ್ತೇವೆ ಎಂದರೆ ಸರಿಯಲ್ಲ. ದಾವಾಸ್ತಿಗಳು ಇನ್ನೂ ವರೆಗೂ ಪಾಲು ಆಗಿಲ್ಲ ಎಂದರೆ ಸಾಕ್ಷಿ ಪಾಲು ಆಗಿರುತ್ತದೆ ಎಂದು ಹೇಳುತ್ತಾರೆ. ಸರ್ವೆ ನಂ.30 ಮತ್ತು 23 ರಲ್ಲಿ ನನ್ನ ಹಾಗೂ ನನ್ನ ಅಣ್ಣತಮ್ಮಂದಿರ ಇನ್ನೂ ವರೆಗೂ ಹೆಸರು ಜಂಟಿಯಾಗಿರುತ್ತವೆ ಎಂದರೆ ಸರಿ. ದಾವಾಸ್ತಿಗಳು ಪಾಲು ಆದ ಬಗ್ಗೆ ಯಾವುದಾದರೂ ದಾಖಲೆ ಬರೆದುಕೊಂಡಿದ್ದೀರಾ ಎಂದರೆ ಸಾಕ್ಷಿ ಬರೆದುಕೊಂಡಿಲ್ಲ ಎಂದು ಹೇಳುತ್ತಾರೆ. ದಾವಾಸ್ತಿಗಳಿಗೆ ಸಂಬಂಧಿಸಿದಂತೆ Form No.10 ಮತ್ತು 11ಇ ಆಗಿರುವುದಿಲ್ಲ.

ದಾವಾಸ್ತಿಗಳಲ್ಲಿ ಭೀಮಬಾಯಿ ಮತ್ತು ಗೌರಮ್ಮರವರಿಗೆ ಪಾಲು ಕೊಟ್ಟಿರುತ್ತೀರಾ ಎಂದರೆ ಸಾಕ್ಷಿ ಅವರು ನಮಗೆ ಆಸ್ತಿ ಬೇಡವೆಂದು ಹೇಳಿರುತ್ತಾರೆ. ಆದರೆ ಯಾವುದೆ ಕಾಗದ ಪತ್ರಗಳನ್ನು ಬರೆದುಕೊಟ್ಟಿಲ್ಲ. ದಾವಾಸ್ತಿಗಳು ಯಾವ ದಿನಾಂಕ, ತಿಂಗಳು, ವರ್ಷದಂದು ಪಾಲು ಆಯಿತು ಎಂದು ನನಗೆ ಗೊತ್ತಿಲ್ಲ. ದಾವಾಸ್ತಿಗಳಲ್ಲಿ ಕೆನಾಲ ಹೋಗಿದೆ ಎಂದರೆ ಸರಿ. ಇನ್ನೂ ವರೆಗೆ ಕೆನಾಲದಿಂದ ಪರಿಹಾರದ ಹಣ ಕೆಬಿಜೆಎನ್ಎಲ್ ಕಚೇರಿಯಲ್ಲಿದೆ ಎಂದರೆ ಸರಿ. ಸರ್ವೆ ನಂ.20/5 ರ ಖರೀದಿ ದಾಖಲೆಗಳು ನಮ್ಮ ಬಳಿ ಇವೆ ಎಂದರೆ ಸರಿ. ಅವುಗಳನ್ನು ಹಾಜರುಪಡಿಸಲು ಏನೂದರೂ ತೊಂದರೆ ಇದೆಯಾ ಎಂದರೆ ಏನೂ ತೊಂದರೆ ಇಲ್ಲ ಎಂದು ಹೇಳುತ್ತಾರೆ. ದಾವಾಸ್ತಿಗಳು ಒಟ್ಟು ಕುಟುಂಬದ ಆಸ್ತಿಗಳಾಗಿದ್ದು ದಾವಾಸ್ತಿಗಳು ನಮ್ಮ ಕುಟುಂಬದ ನಡುವೆ ಇನ್ನೂ ಪಾಲು ಆಗಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂ.20/5 ನನ್ನ ಸರ್ವಯಾರ್ಜಿತ ಆಸ್ತಿ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೆ ನಂ.20/5 ರಲ್ಲಿ ಎಲ್ಲರಿಗೂ ಪಾಲು ಇದೆ ಎಂದರೆ ಸರಿಯಲ್ಲ. ಸರ್ವೆ ನಂ.20/5 ರ ಖರೀದಿ ಪತ್ರ ನನ್ನ

ಹೆಸರಿನಲ್ಲಿರುವುದರಂದ ಅದರ ಪಾಯಿದೆ ತೆಗೆದುಕೊಂಡು ನನ್ನ ಸ್ವಯಾರ್ಜಿತ ಆಸ್ತಿಯೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ ಇದೆ

ಸಿವಿಲ್ ನ್ಯಾಯಾಧೀಶರು
ಜೇವರ್ಗಿ